# ಮೊಬೈಲ್ ಜಾಲ, ತಪ್ಪಿತೆ ತಾಳ?

ಹೆಸರಾಂತ ಇಂಗ್ಲಿಷ್ ಲೇಖಕ ಯುಧಿಜಿತ್ ಭಟ್ಟಾಚಾರ್ಯ ಅವರ ಮೊಬೈಲ್ ಅನುಭವದ ಈ ಕಥೆಯನ್ನು ಆರಂಭದಲ್ಲೇ ಒಮ್ಮೆ ಕೇಳಿಸಿಕೊಂಡು ಬಿಡಿ. ಜಗತ್ತನ್ನು ಸದಾ ಸುತ್ತುವ ಈ ಲೇಖಕ ಕೋಲ್ಕತ್ತದಲ್ಲಿರುವ ತಮ್ಮ ತಂದೆಗೆ ಸ್ಮಾರ್ಟ್‌ಫೋನ್‌ನಿಂದ ಸ್ಕೈಪ್ ಕಾಲ್ ಮಾಡುವುದು ರೂಢಿ. ಒಮ್ಮೆ ಡೆನ್ಮಾರ್ಕ್ ಪ್ರವಾಸದಲ್ಲಿದ್ದಾಗ ಎಂದಿನಂತೆ ತಂದೆಗೆ ಕಾಲ್ ಮಾಡಿದ್ದ ಭಟ್ಟಾಚಾರ್ಯ ಕೈಯಲ್ಲಿದ್ದ ಫೋನನ್ನು ಕಿಟಕಿಯಾಚೆಗೆ ತಿರುಗಿಸಿ ಅಲ್ಲಿನ ರಮಣೀಯ ದೃಶ್ಯಗಳನ್ನು ತೋರಿಸುತ್ತಾ ಹೋಗಿದ್ದರಂತೆ. ‘ಡೆನ್ಮಾರ್ಕ್‌ನಿಂದ ಸ್ವೀಡನ್‌ವರೆಗಿನ ಆ ಸ್ಮರಣೀಯವಾದ ಸುದೀರ್ಘ ಯಾತ್ರೆಯಲ್ಲಿ ಅಪ್ಪನೂ ನನ್ನ ಜತೆಯಲ್ಲೇ ಇದ್ದಂತೆ ಭಾಸವಾಗಿತ್ತು’ ಎಂದು ಅವರು ಹೇಳಿಕೊಂಡಿದ್ದರು.

ಸ್ಮಾರ್ಟ್‌ಫೋನ್ ಪ್ರಿಯರೇ, ಸಂಭ್ರಮದಿಂದ ಈ ಕಥೆಯನ್ನು ಫೇಸ್‌ಬುಕ್‌ಗೆ ಪೋಸ್ಟ್ ಮಾಡುವ ಆತುರ ಬೇಡ; ಸ್ವಲ್ಪ ಸಾವಧಾನ. ಅದೇ ಸಾಧನ ತಮ್ಮ ಜೀವನದಲ್ಲಿ ಹೇಗೆ ವ್ಯಾಕುಲಕ್ಕೆ ಕಾರಣವಾಗಿದೆ ಎನ್ನುವುದನ್ನೂ ಭಟ್ಟಾಚಾರ್ಯ ಅವರು ಹೇಳಿಕೊಳ್ಳಲಿಕ್ಕೆ ಉಂಟು.

‘ಕುಟುಂಬದ ಸದಸ್ಯರು ಹಾಗೂ ಸ್ನೇಹಿತರು ಜತೆಗಿದ್ದರೂ ಭಯಾನಕ ಕ್ರಮಬದ್ಧತೆಯಿಂದ, ಅಲರ್ಟ್ ನೋಟಿಫಿಕೇಶನ್‌ಗಳಿಂದ ತನ್ನತ್ತ ಸೆಳೆಯುವ ಈ ಫೋನ್‌ನಿಂದಾಗಿ ಎದುರು–ಬದುರಿನ ಖುದ್ದು ಸಂವಹನ ಕುಂಠಿತಗೊಂಡಿದೆ. ನಾನು ಕೋಲ್ಕತ್ತಕ್ಕೆ ಹೋದಾಗ ಎದುರಿನಲ್ಲಿ ನನ್ನ ಪ್ರೀತಿಯ ತಂದೆಯಿದ್ದರೂ ಅವರೊಂದಿಗೆ ಪಟ್ಟಾಂಗದಲ್ಲಿ ತೊಡಗಲು ಸಾಧ್ಯವಾಗಲಿಲ್ಲ. ಫೇಸ್‌ಬುಕ್‌ನಲ್ಲಿ ನಾನು ಮಾಡಿದ ಹೊಸ / ಪೋಸ್ಟ್‌ಗೆ ಎಷ್ಟು ಲೈಕ್‌ಗಳು ಬಿದ್ದವು ಎಂದು ಮತ್ತೆ ಮತ್ತೆ ಫೋನ್ ನೋಡುವುದರಲ್ಲಿಯೇ ನಾನು ತಲ್ಲೀನನಾಗಿದ್ದೆ. ಕಮೆಂಟ್‌ಗಳನ್ನು ಓದುವುದರಲ್ಲೇ ಖುಷಿ ಅನುಭವಿಸಿದ್ದೆ. ದೂರದ ಡೆನ್ಮಾರ್ಕ್‌ನಲ್ಲಿದ್ದಾಗ ಅಪ್ಪನನ್ನು ಹತ್ತಿರಕ್ಕೆ ಕರೆತಂದಿದ್ದ ಅದೇ ಫೋನ್, ಕೋಲ್ಕತ್ತದಲ್ಲಿ ಅಪ್ಪ ಭೌತಿಕವಾಗಿ ಹತ್ತಿರದಲ್ಲಿದ್ದರೂ ನನ್ನನ್ನು ಅವರಿಂದ ದೂರ ಮಾಡಿತ್ತು’ ಎಂದು ಅವರು ಬರೆದುಕೊಂಡಿದ್ದರು.

ಮಾನವೀಯ ಸಂಬಂಧಗಳನ್ನು ಅನಾಮತ್ತಾಗಿ ಹೆಡಮುರಗಿ ಕಟ್ಟಿ ಒಗೆದ ಮೊಬೈಲ್ ಮಾಯಾಂಗನೆಯ ವೈಖರಿಯನ್ನೊಮ್ಮೆ ನೆನಪಿಸಿಕೊಂಡರೆ ಯುಧಿಜಿತ್ ಅವರ ಆ ಅನುಭವ ನಮ್ಮ ಅನುಭವವೂ ಆಗಿ ಕಾಡುತ್ತದೆ. ಕೈಯಲ್ಲಿರುವ ಆ ಪುಟ್ಟ ಸಾಧನ ಈಗ ಸಂವಹನದ ಮಾಧ್ಯಮವಾಗಿ ಮಾತ್ರ ಉಳಿದಿಲ್ಲ. ಮಾತನಾಡಲು, ಎಸ್‌ಎಂಎಸ್ ಕಳುಹಿಸಲು, ಇ–ಮೇಲ್ ಮಾಡಲು ಅಷ್ಟೇ ಅಲ್ಲದೆ, ಊಟ–ತಿಂಡಿಗೆ ಆರ್ಡರ್ ಮಾಡಲು, ದಾರಿಯನ್ನು ಹುಡುಕಲು, ಕ್ಯಾಬ್ ಬುಕ್ ಮಾಡಲು, ಯಾವುದೇ ಸರಕಿನ ಬೆಲೆ ಹೋಲಿಕೆ ಮಾಡಿ ನೋಡಲು, ಸುದ್ದಿಗಳನ್ನು ತಿಳಿಯಲು, ಸಿನಿಮಾಗಳನ್ನು ವೀಕ್ಷಿಸಲು, ಸಂಗೀತವನ್ನು ಆಸ್ವಾದಿಸಲು, ವಿಡಿಯೊ ಗೇಮ್‌ಗಳನ್ನು ಆಡಲು... ಹೀಗೆ ಯರ್‍ರಾಬಿರ್‍ರಿ ಕಾರಣಗಳಿಗೆ ಬಳಕೆ ಆಗುತ್ತಿದೆ. ಸ್ಮಾರ್ಟ್‌ಫೋನ್ ಇಲ್ಲದ ಜಗತ್ತನ್ನು ಈಗ ಕಲ್ಪಿಸಿಕೊಳ್ಳಲೂ ಆಗುವುದಿಲ್ಲ.

ಬೆಂಗಳೂರಿನ ಮೆಟ್ರೊ ರೈಲಿನೊಳಗಿನ ದೃಶ್ಯವನ್ನು ನೀವೊಮ್ಮೆ ನೋಡಬೇಕು. ಆ ಗಿಜಿಗುಡುವ ಸಂತೆಯಲ್ಲಿ ಎಲ್ಲರೂ ಮೊಬೈಲ್ ಸಂತರೇ. ಅಬ್ಬಬ್ಬಾ! ಸುತ್ತಲೂ ಏನು ನಡೆಯುತ್ತಿದೆ ಎಂಬ ಪರಿವೇ ಇಲ್ಲದಂತಹ ಎಂತಹ ತಾದ್ಯಾತ್ಮ ಭಾವ, ಆ ಡಿಜಿಟಲ್ ಜಗತ್ತಿನೊಳಗೆ. ಈ ಧ್ಯಾನಸ್ಥ ಸ್ಥಿತಿಯನ್ನೇನು ಮೊಬೈಲ್ ಆಧ್ಯಾತ್ಮ ಎಂದು ಕರೆಯೋಣವೇ? ಹೌದು, ಸಾವಿರಾರು ಜನರಿಂದ ರೈಲು ತುಂಬಿ ತುಳುಕುತ್ತಿದ್ದರೂ ಕೈಯಲ್ಲಿರುವ ಮೊಬೈಲ್‌ನಿಂದಾಗಿ ಪಕ್ಕದವರ ಸಂಪರ್ಕವನ್ನೇ ಕಳೆದುಕೊಂಡ ಅಲ್ಲಿನ ಒಬ್ಬೊಬ್ಬರೂ ಒಂದೊಂದು ದ್ವೀಪವೇ!

ಗ್ರಾಮಾಂತರ ಭಾಗದ ಕೋಟ್ಯಂತರ ಜನರ ಮನೆಬಾಗಿಲಿಗೆ ಬ್ಯಾಂಕಿಂಗ್ ವಲಯವನ್ನು ಕೊಂಡೊಯ್ದದ್ದು ಇದೇ ಸ್ಮಾರ್ಟ್‌ಫೋನ್. ವಿಪತ್ತು ನಿರ್ವಹಣೆ ಸನ್ನಿವೇಶದಲ್ಲೂ ಜನರನ್ನು ಸಂರಕ್ಷಿಸಲು ಈ ಸಾಧನ ನೆರವಿಗೆ ಬಂದಿದ್ದನ್ನು ಯಾರೂ ಅಲ್ಲಗಳೆಯಲಾರರು. ಒಡಿಶಾದಲ್ಲಿ ಇತ್ತೀಚೆಗೆ ಸಂಭವಿಸಿದ ಚಂಡಮಾರುತ ದುರಂತದ ಉದಾಹರಣೆಯನ್ನೇ ತೆಗೆದುಕೊಂಡರೆ ಸಾವಿರಾರು ಸಾವುಗಳನ್ನು ತಪ್ಪಿಸಿದ ಕೀರ್ತಿ ಮೊಬೈಲ್‌ಗೆ ಸಲ್ಲುತ್ತದೆ. ಇನ್ನು ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಎಷ್ಟು ದೂರ ನಡೆದಿದ್ದೇವೆ,

